ಕರ್ನಾಟಕ ವಿಧಾನಸಭೆ

ಮಂಗಳವಾರ 17ನೇ ಮಾರ್ಚ್ 1992

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-30 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (**ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ**) ಅವರು ಪೀಠವನ್ನು

ಅಲಂಕರಿಸಿದ್ದರು.

ಉಪಾಧ್ಯಕ್ಷರು : ಈಗ ಮಾನ್ಯ ಕಂದಾಯ ಮಂತ್ರಿಗಳಿಂದ ಉತ್ತರ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷಿಣಿಯವರೆ. ನಾನು ಮಾತನಾಡಬೇಕಾಗಿತ್ತು.

ಉಪಾಧ್ಯಕ್ಷರು : ಚರ್ಚೆ ಮುಗಿದಿದೆ. ಈಗ ಆಗುವುದಿಲ್ಲ. ನಿನ್ನೆ ದಿವಸ ಮಾತನಾಡಬೇಕೆಂದು ಹೆಸರು ಕೊಟ್ಟಿದ್ದವರನ್ನೆಲ್ಲಾ ಕರೆದಿದ್ದೆ. ನಿನ್ನೆಯೇ ಚರ್ಚೆ ಮುಗಿದಿರುವುದರಿಂದ ಈಗ ಮಾನ್ಯ ಕಂದಾಯ ಸಚಿವರು ಉತ್ತರ ಕೊಡಬೇಕು.

ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ (ಮುಂದುವರೆದುದು)

(ಕಂದಾಯ ಮಂತ್ರಿಗಳಿಂದ ಉತ್ತರ)

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮತ್ತು ಗ್ರಾಮಾಣಾಭಿವೃದ್ಧಿ ಸಚಿವರು): ಸನ್ಮಾನ್ಯ ಅಧ್ಯಕ್ಷಿಣಿಯವರೆ, ನಿನ್ನೆ ಮಾನ್ಯ ಶಿವರಾಮೇಗೌಡರು, ಕೆ. ಸಿದ್ದಯ್ಯನವರು, ಮಾನ್ಯ ಶಿವನಂಜಪ್ಪನವರು, ಶ್ರೀಮತಿ ಮಲ್ಲಾಜಮ್ಮನವರು, ಮಾನ್ಯ ವಿನಯಕುಮಾರ್ ಸೊರ್ಕೆಯವರು, ಮಾನ್ಯ ಸೋಮಪ್ಪ ಸುವರ್ಣ ಅವರು, ಮಾನ್ಯ ಪಿ.ವಿ. ವೆಂಕಟಪ್ಪನವರು, ಮಾನ್ಯ ಲಿಂಗಪ್ಪನವರು, ಮಾನ್ಯ ನಾರಾಯಣ್‌ರವರು ರೆವಿನ್ಯೂ ಇಲಾಖೆ ಬೇಡಿಕೆ ಮೇಲೆ ಮತ್ತು ಆರ್.ಡಿ.ಪಿ.ಆರ್. ಇಲಾಖೆ ಬೇಡಿಕೆ ಮೇಲೆ ಮಾತನಾಡುತ್ತಾ, ಕೆಲವು ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ ಮತ್ತು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಅದೇ ರೀತಿಯಾಗಿ ಎಲ್ಲಿ ಲೋಪದೋಷಗಳು ಇವೆ ಅವುಗಳ ಬಗ್ಗೆ ಕಟುವಾಗಿ ಟೀಕೆ ಕೂಡ ಮಾಡಿದ್ದಾರೆ. ಮುಖ್ಯವಾಗಿ ರೆವಿನ್ಯೂ ಇಲಾಖೆ ಏನಿದೆ, ಇದು ಅತ್ಯಂತ ಹಳೆಯ ಇಲಾಖೆಯೂ ಹೌದು. ಈ ಇಲಾಖೆಯ ಅಧೀನದಲ್ಲಿ ಅನೇಕ ಇಲಾಖೆಗಳು ಹಿಂದೆ ಕೆಲಸ ಮಾಡುತ್ತಾ ಇದ್ದವು. ಆದರೆ ಕಾರಣಾಂತರಗಳಿಂದ ಇವೊತ್ತು ಈ ಇಲಾಖೆಯು ಸಿಂಕ್ರೋನೈಸ್ ಆಗಿ ಒಂದು ರೀತಿಯಲ್ಲಿ ಹೋಗುತ್ತಾ ಇದೆ. ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಗೆ ಏನೊಂದು ಹಿಡಿತ ಇತ್ತು ಅದು ಅನೇಕ ಕಾರಣಗಳಿಂದ ತಪ್ಪಿ ಹೋಗುತ್ತಾ ಇದೆ. ಏಕೆಂದರೆ ಇವೊತ್ತು ಸ್ವತಂತ್ರವಾಗಿ ತಮ್ಮದೇ ಆದಂಥ ಒಂದು ಇಲಾಖೆಗಳನ್ನು ಸೃಷ್ಟಿ ಮಾಡಿಕೊಂಡ ಮೇಲೆ ಬಹುಶಃ ಇದರ ಮಹತ್ವ ಕಡಿಮೆಯಾಗಿದೆ ಎಂದು ನಾನಾದರೂ ಭಾವಿಸುತ್ತೇನೆ. ನಾನು 1980ರಲ್ಲಿಯೂ ಕೂಡ ರೆವಿನ್ಯೂ ಇಲಾಖೆಯನ್ನು ಪಡೆಸಿಕೊಂಡಿದ್ದೆ. ಸುಮಾರು ಮೂರು ವರ್ಷಗಳ ಕಾಲ ಇದರಲ್ಲಿ ಕೆಲಸ ಮಾಡತಕ್ಕಂಥ ಅವಕಾಶವು ನನಗೆ ಸಿಕ್ಕಿತ್ತು. ಆವೊತ್ತಿಗೂ, ಇವೊತ್ತಿಗೂ ಹೋಲಿಸಿ ನೋಡಿದಾಗ